ತಾರೀಖು 18ನೆ ಮೇ 1907.

ನಂ. 10809—ಮೆಡಿಕಲ್ 240-06-9, 1907. ಇಸವಿಯ ಮಾರ್ಚಿ 1ನೆ ತಾರೀಖಿನ 7453—ಮೆಡಿಕಲ್ 240—06-2ನೆ ನಂಬರಿನ ಮತ್ತು 1907ನೆ ಇಸವಿಯ ಮಾರ್ಚಿ 30ನೆ ತಾರೀಖಿನ 9032 ಮೆಡಿಕಲ್ 240-06-5ನೆ ನಂಬರಿನ ಸರ್ಕಾರಿ ಇಸ್ತಿಹಾರ್‌ನಾಮೆಗಳಲ್ಲಿ ಸಿವಿಲ್ ಸರ್ಜನ್ ಮಿ॥ ಇ. ಎಸ್. ಕೃಷ್ಣಸ್ವಾಮಿ ಐಯರಿಗೆ ಕೊಟ್ಟಿದ್ದ ಪ್ರಿವಿಲೇಜ್ ರಜಾವಿನಿಂದ ಅವರನ್ನು ವಾಪಸು ಕರೆಯಿಸಿ ಇರಲಾಗಿ, 1907ನೆ ಇಸವಿಯ ಏಪ್ರಿಲ್ 27ನೆ ತಾರೀಖಿನ ಅಪರಾಹ್ನದ ಲಾಗಾಯ್ತು, ಅವರಿಗೆ ಕೊಟ್ಟಿದ್ದ ರಜಾವಿನಲ್ಲಿ ಗತಿಸದೆ ಉಳಿದಿರುವ ಭಾಗವನ್ನು ಅವರು ಉಪಯೋಗಿಸಿಕೊಳ್ಳಬಹುದೆಂತ ಅಪ್ಪಣೆ ಕೊಟ್ಟಿದೆ.

ತಾರೀಖು 16ನೆ ಮೇ 1907.

ನಂ. 10765—ವಿಜ್ಯು. 23-06-14, ಮೈಸೂರು ಮಹಾರಾಜಾ ಕಾಲೇಜಿನ ಗಣಿತಶಾಸ್ತ್ರ ಪಂಡಿತರು ಮಿ॥ ಟಿ. ಆರ್. ವೆಂಕಟಸಾಮಿ ನಾಮಡ್ಡು ಯುವರಿಗೆ 1906ನೆ ಇಸವಿಯ ಮೇ 4ನೆ ತಾರೀಖಿನ 11385—ಎಡ್ಯು. 266-05-2ನೆ ನಂಬರ್ ಸರ್ಕಾರಿ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟ ಮೂರು ತಿಂಗಳ ಪ್ರಿವಿಲೇಜ್ ರಜಾವಿನೊಂದಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 155ನೆ ಪ್ರಕರಣವನ್ನನುಸರಿಸಿ 1906ನೆ ಇಸವಿಯ ಜೂನ್ 27ನೆ ತಾರೀಖಿನಿಂದ ಡಿಸೆಂಬರ್ 7ನೆ ತಾರೀಖಿನ ವರೆಗೆ ಉಭಯದಿನಗಳೂ ಸೇರಿ, ವೈದ್ಯರ ಸರ್ಟಿಫಿಕೇಟಿನ ಮೇಲೆ ರಜಾ ಕೊಟ್ಟಿದೆ.

ತಾರೀಖು 24ನೆ ಏಪ್ರಿಲ್ 1907.

ನಂ. ರೆ. 9509—ಲ್ಯಾ. ರೆ. 517-06-3, ಸ॥ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಚಾಮರಾಜನಗರದ ಹೊಸದಾಗಿ ಮನೆಗಳನ್ನು ಕಟ್ಟುವುದಕ್ಕಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಡಿವೀಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಗ್ರಾಮ.	ಖಾತೆದಾರರ ಹೆಸರು	ಸರ್ವೆ ನಂ.	ಖುಷ್ಕಿ ಬಾಗಾಯ್ತು	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ. ವಿಸ್ತೀರ್ಣ.	ಕಂದಾಯ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಚಾಮರಾಜನಗರ	ಚಾಮರಾಜ ನಗರ	(1) ರಹಿಮಾನ್‌ಸಾಬ್. (2) ಹನೀಫುಸಾಬ್. (3) ಕಾಸಿಂಸಾಬ್.	$\frac{356}{2}$	ನ. ಗು. 1 24	ರೂ. ಅ. — 12	ನ. ಗು. 0 32	ರೂ. 1	ಕರ್ಣಸೂನಸಿ ರಸ್ತೆ	ಮ್ಯುನಿಸಿಪಲ್ ಎಲ್ಡಿಯ ರಸ್ತೆ	356-2ನೆ ಸರ್ವೆ ನಂಬರಿನ ಭಾಗ.	ಪೂರ್ವ

ತಾರೀಖು 27ನೆ ಏಪ್ರಿಲ್ 1907.

ನಂ. ರೆ. 9567—ಲ್ಯಾ. ರೆ. 519-06-3, ಸ॥ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ ಅದರಲ್ಲಿರುವ ಒಂದು ಗೋಕಟ್ಟೆಯನ್ನು ಅಭಿವೃದ್ಧಿಪಡಿಸುವುದಕ್ಕೋಸರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಚಿತ್ರದುರ್ಗ ಡಿವೀಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಗ್ರಾಮ.	ಹಿಡುವಳಿದಾರರ ಹೆಸರು	ಸರ್ವೆ ನಂಬರ್.	ಖುಷ್ಕಿ ಬಾಗಾಯ್ತು	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ. ವಿಸ್ತೀರ್ಣ.	ಕಂದಾಯ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಚಿತ್ರದುರ್ಗ	ಹಿರಿಯೂರು	ಅರಸಿನಗುಂಡಿ	ಹನುಮಕ್ಕ ...	55	ಖುಷ್ಕಿ ...	ಎ. ಗು. 14 11	ರೂ. ಅ. 5 8	60ನೆ ಸರ್ವೆ ನಂಬರು	54ನೆ ಸರ್ವೆ ನಂಬರು	57ನೆ ಸರ್ವೆ ನಂಬರು	59ನೆ ಸರ್ವೆ ನಂಬರು